ಮಾತು ಸತ್ಯ ಅಂತ ನಂಬತೊಡಗಿದ ಅವಿನಾಶ. ಅವನ ವ್ಯಕ್ತಿತ್ವವೇ ಹಾಗಿದೆ, ಏನಾದ್ರೂ ಗೀಳು ಒಮ್ಮೆ ತಲೆ ಹೊಕ್ಕಿತೆಂದರೆ ಅವನ ಪೂರ ಸೈಕೀ ಅದಕ್ಕೆ ಸಾಥ್ ಕೊಡಲಾರಂಭಿಸುತ್ತದೆ, ತನಗೆ ತಾಯ್ನಾಡಿನ ಪ್ರೀತಿ ಎಷ್ಟಿದೆಯಲ್ಲ! ಅಂತ ಸ್ವತಃ ಅವನಿಗೇ ಹೆಮ್ಮೆ ಹುಟ್ಟತೊಡಗಿತ್ತು. ಮಧುವನ್ನು ತಾ ಜೀವಕ್ಕಿಂತ ಹೆಚ್ಚು ಪ್ರೀತಿಸೋ ಮಾತು ಹೇಳುವಾಗ ಕಣ್ಣೀ ತುಂಬಿ ಬಂದವವನಿಗೆ.

ಪ್ರದೀಪ ಇಂಥದ್ದೊಂದು ಸೂಕ್ಷ್ಮ ಅವಕಾಶಕ್ಕೆ ಕಾಯುತ್ತಿದ್ದವನಂತೆ

'ಇದೆಲ್ಲ ಸಹಜ ಅವಿ, ಅದರಾಗೂ ನೀ ಎಂಥಾ ಎಮೋಶನಲ್ ಮನಶ್ಯಾ ಅಂತ ನಂಗೊತ್ತಿಲ್ಲೇನೋ?' ಅನ್ನುತ್ತಾ ಬ್ಯಾಕ್ ಪ್ಯಾಕ್ ನಿಂದ ಬೀರ್ ಕ್ಯಾನ್ ಮತ್ತು ಜಾಕೆಟ್ ಜೇಬಿನಿಂದ ಸಣ್ಣದೊಂದು ಖಾರದ ಗೋಡಂಬಿ ಪ್ಯಾಕೆಟ್ಟನ್ನೂ ತೆರೆದಿಟ್ಟ. ಖಾರದ ಗೋಡಂಬಿ ಅವಿನಾಶನ ಕಣ್ಣಲ್ಲಿ ಮತ್ತಷ್ಟು ನೀರುಕ್ಕಿಸಿದವು.

ಜನವರಿ ಮೊದಲ ವಾರದಲ್ಲಿ ಐ 20 ಫಾರ್ಮ ಆರಿಝೋನಾ ಸ್ಟೇಟ್ ಯುನಿವರ್ಸಿಟಿಯಿಂದ ಬಂದಾಗ ವೀಸಾನೇ ಸಿಕ್ಕಿತೇನೋ ಎಂಬಂತೆ ಖುಷಿಯಾದ ಅವಿನಾಶ.

ಮಧುನೂ 'ನೀವಲ್ಲಿ ಹೋದ ಕೂಡಲೇ ಫಾಲ್ ಶುರುವಾಗಿರ್ತದೆ ಅತೀ ಥಂಡಿ ಇರ್ತದೆ' ಅನ್ನುತ್ತಾ ಅಮೆಜಾನ್ ದಿಂದ ಥರ್ಮಲ್ಸ್, ಜಾಕೆಟ್, ಉಣ್ಣೆಯ ಕಾಲುಚೀಲ, ಟೋಪಿ ಅಂತೆಲ್ಲ ತರಿಸಿ ಸೂಟಕೇಸ್ ತುಂಬಿಸಿದಳು. ಎಮ್ ಟಿ ಆರ್ ನ ಧಿಡೀರ್ ಉಪ್ಪಿಟ್ಟು, ಬಿಸಿಬೇಳೆ ಭಾತ್ ಗಳ ಪಾಕೀಟೂ ಬಂದವು. ತಾಲಿಪಟ್ಟಿನ ಹಿಟ್ಟನ್ನು ಅವ್ವನಿಂದ ಮಾಡಿಸಿಟ್ಟಳು. 'ಕರಿಯರ್ ಗಾಗಿ ಪರಸ್ಪರ ಬಿಟ್ಟಿರೋದು ಅನಿವಾರ್ಯವಿದೆ, ನಿನ್ನ ಪ್ರಗತಿಯಾಗಬೇಕೆಂದೇ ನಾನು ಈ ತ್ಯಾಗ ಮಾಡ್ತಿದ್ದೇನೆ' ಅಂತ ಒಬ್ಬರಿಗೊಬ್ಬರು ಮನದಟ್ಟು ಮಾಡಿಸೋ ಘಟ್ಟ ಮುಗಿದು ಹೋಗಿದ್ದರಿಂದ ಇಬ್ಬರೂ ಒಂಥರಾ ನಿರಾಳವಾಗಿದ್ದರು.

ಎಂದಿನಂತೆ ಸಂಜೆ ಮತ್ತೊಮ್ಮೆ ಪೇಪರ್ ಮೇಲೆ ಕಣ್ಣಾಡಿಸೋ ಕೆಲಸ ಮುಗಿಸುವಾಗಲೇ 'ಅಮ್ಮ ಕೊಟ್ಟಾರೆ' ಅನ್ನುತ್ತಾ ಒಳಬಂದ ಪಕ್ಕದ ಮನೆಯ ಸಂಜು ಚಿಕ್ಕ ಸ್ಟೀಲ್ ಡಬ್ಬ ಟೀಪಾಯ್ ಮೇಲಿಟ್ಟ.

'ಬಾರೋ ಸಂಜು ಕೂಡು' ಅಂದ ಅವಿನಾಶ,



ಹುಡುಗ ಜಿಗಿಯುತ್ತಾ ಬಂದು ಸೋಫಾದಲ್ಲಿ ಇವನ ಪಕ್ಕವೇ ಕೂತ. ಅವಿನಾಶ ತನ್ನ ಕೈಲಿದ್ದ ಸ್ಪೋರ್ಟ್ಸ್ ಪೇಜಿನ ಫಳ ಫಳ ಹೊಳೆಯೋ ಕೆಂಪು ಕಾರ್ ಚಿತ್ರ ತೋರಿಸಿ 'ಹೆಂಗದ?' ಅಂತ ಹುಬ್ಬು ಹಾರಿಸಿದ.

ಸಂಜು 'ಮಸ್ತ್ ಮಸ್ತ್ ಹೊಂಡಾ' ಅನ್ನುತ್ತಾ 'ಕಾಕಾ ಸಮೀಪದಿಂದ ನೋಡ್ತೇನಿ ಕೊಡು' ಅಂತ ಪೇಪರ್ ಕಿತ್ತಿಕೊಳ್ಳಲು ಬಂದ. ಕೈ ಮೇಲೆತ್ತಿ ಹಿಡಿದು ನಕ್ಕ ಅವಿನಾಶ 'ಹಂಗೆಲ್ಲಾ ಕೊಡಂಗಿಲ್ಲ, ಒಂದು ಕ್ವಿಜ್ ಮಾಡ್ತೇನಿ. ನಾ ಕಾರ್ ಹೆಸರು ಹೇಳ್ತೇನಿ ನೀ ಅದನ್ನು ತಯ್ಯಾರಿಸೋ ದೇಶದ ಹೆಸರು ಹೇಳ್ಬೇಕು. ನೀ ಕರೆಕ್ಟ್ ಉತ್ತರಾ ಕೊಟ್ಟ ಅಂದರ ನಾ ನಿನಗ ಕಾರ್ ಚಿತ್ರಾನೂ ಕೊಡ್ತೇನಿ, ಜೋಡೀಗೆ ಕ್ಯಾಡಬರೀನೂ ಕೊಡ್ತೇನಿ ಓಕೆ?' ಅಂದ.

ಹುಡುಗ ಓ.....ಎನ್ನುತ್ತಾ ಖುಷಿಯಿಂದ ತಯ್ಯಾರಾದ.

ಲೆಕ್ಸಸ್.

ಜಪಾನ್